ಎಲ್ಲಿರಬಹುದೆಂದು ಊಹಿಸಿ ಊಹಿಸಿ ಸುಸ್ತಾದರು. ಪ್ರೇಮಿಗಳಿಬ್ಬರು ಗೋವಾ ಬಸ್ ಹತ್ತಿರಬಹುದೆಂದು ಒಬ್ಬರು ಹೇಳಿದರೆ, ಮುಂಬಯಿಗೆ ಹೋಗಿರುವ ಸಾಧ್ಯತೆ ಇದೆಯೆಂದು ಮತ್ತೊಬ್ಬರೆಂದರು. ಅವರನ್ನು ಹುಡುಕುವ ನೆಪದಲ್ಲಿ ಆ ಊರುಗಳಿಗೆ ಅಡ್ಡಾಡಿ ಬರುವ ಯೋಚನೆಯೂ ಕೆಲವರಿಗೆ ಇತ್ತೆಂದು ಕಾಣುತ್ತದೆ. ಮಾಯಕ್ಕನ ಅವ್ವ, ಅಪ್ಪ ಮತ್ತಿತರರು ಬಂದ ದಾರಿಗೆ ಸಂಕಟದ ಸುಂಕ ಕೊಟ್ಟು ವಾಪಸ್ ಮನೆಗೆ ಬಂದರು. ಮುಂದೆ ಕೆಲ ದಿನಗಳಲ್ಲಿ ದೇವಪ್ಪ ಮತ್ತು ಮಾಯಕ್ಕ ಮಲ್ಲೂರಿಗೆ ಮರಳಿದರೆಂಬ ಸುದ್ದಿ ಬಂದಿತು. ತಮ್ಮ ಹುಡುಗಿಯೇ ತಾನಾಗಿ ಹೋಗಿದ್ದಾಳೆ, ಇನ್ನು ತಾವು ಹೋಗಿ ಮಾಡುವುದೇನೆಂದು ಮತ್ತೆ ಆ ಕಡೆ ಹೆಜ್ಜೆಯಿಡಲಿಲ್ಲ. ದೇವಪ್ಪಮಾಯಿ ಎರಡು ತಿಂಗಳು ಬೆಳಗಾವಿಯಲ್ಲಿ ಇದ್ದರಂತೆ. ಅವನ ಸಂಬಂಧಿಕರೊಬ್ಬರು ಆಶ್ರಯ ಕೊಟ್ಟಿದ್ದರಂತೆ. ಜನ ಈ ವಿಷಯವನ್ನು ಈಗ ಮರೆತಿರುತ್ತಾರೆಂದು ಮತ್ತೆ ಮಲ್ಲೂರಿಗೆ ಮರಳಿದರು.

ಮೊದಮೊದಲು 'ಇಂತಹ ಕೆಲಸ ಮಾಡಿದ ಮಗಳು ಸಾಯ್ಲಿ' ಎನ್ನುತ್ತಿದ್ದ ಅವ್ವ ಈಗೀಗ ಮನಸ್ಸು ಬದಲಾಯಿಸಿ 'ಮಗಳು ಎಲ್ಲಿಯಾದರೂ ಇರಲಿ, ಒಟ್ಟಿನಲ್ಲಿ ಆರಾಮದಿಂದ ಇರಲಿ' ಎನ್ನತೊಡಗಿದಳು. ಮಗಳ ಕ್ಷೇಮ ಸಮಾಚಾರ ಅವಳಿಗೆ ಹೇಗೂ ತಲುಪುತ್ತಿತ್ತು. ಅವರಿವರು ಬಂದು ಆಕೆ ಭೆಟ್ಟಿಯಾಗಿದ್ದನ್ನು ಹೇಳುತ್ತಿದ್ದರು. ಊರಲ್ಲಿ ಮಾಯಕ್ಕನಿಗೆ ಬಹಳ ಗೌರವ ಅಂತೆ. ಅಂತೆ ಪಂತೆಗಳು ಹೀಗೆಯೆ ಇರಲಿ ಎಂದುಕೊಂಡರು ಅವ್ವ, ಅಜ್ಜಿ. ಒಂದು ದಿನ ಮಾಯಕ್ಕನ ಮೊದಲಿನ ಗಂಡ ಮುತ್ತಪ್ಪ ಅಕ್ಕನ ಹತ್ತಿರ ಬಂದು ಮುಸುಗುಟ್ಟಿದ–

'ಅಲ್ಲವಾ ಅಕ್ಕ, ಆಕೀ ನಿಮ್ಮ ಕಿಮ್ಮತ್ತಷ್ಟೇ ಕಳೆದಿಲ್ಲ. ನಂದೂ ಗೌರವ ಕಳೆದಾಳ. ಆಕೀನ್ನ ನೀವು ಸುಮ್ಮನ ಹೆಂಗ ಬಿಟ್ರಿ? ಏಟಿಗೆ ಎದುರೇಟು ಆಗಲಿಕ್ಕೆ ಬೇಕು. ನನ್ನದು ಯಾವಾಗ್ಲೂ ಸೇರಿಗೆ ಸವ್ವಾ ಸೇರು. ಆಕೀನ ಮಾತ್ರ ನಾ ಸುಮ್ಮನ ಬಿಡಂಗಿಲ್ಲ. ಏನು ತಿಳ್ಕೊಂಡಾಳೆ ಆಕಿ. ಹೀಂಗ ಬಿಟ್ರ ಎಲ್ಲಾ ಹೆಂಗಸರು ಹೀಂಗ ಸುರು ಮಾಡ್ತಾರ. ನೀವೂ ಬರ್ರಿ ನನ್ನ ಜೋಡಿ. ಮಲ್ಲೂರಿಗೆ ಹೋಗೋಣ. ದೇವ್ಯಾನ ಮೂಗು ಹಿಡಿದ್ರ ಈಕಿ ಬಾಯಿ ತೆಗಿತಾಳು.'

ಅಕ್ಕನಿಗೂ ಸಿಟ್ಟು ಬಂದಿತು. 'ಅಲ್ಲೋ ಮುತ್ತಣ್ಣ, ನೀನು ಆಗಲೆ ಆಕಿ ಕಡೆಯಿಂದ ಬಿಡುಗಡೆ ಪಡೆದಿದಿ. ನೀವಿಬ್ಬರೂ ಗಂಡಹೆಂಡತಿ ಅಲ್ಲ ಅಂತ ಸೋಡಚೀಟಿ ಮಾಡಿಕೊಂಡೀರಿ. ಮಾಯೀ ನಿನ್ನ ಹೇಂತಿ ಅಲ್ಲ. ನೀನು ಅವಳ ಗಂಡ ಅಲ್ಲ. ಆಕೀ ಯಾರನ್ನಾದರೂ ಮದುವಿಯಾಗಲಿ ಬಿಡು. ನಿನಗೇನು ಸಂಬಂಧ? ನೀನೂ ನಿನಗ ಬೇಕಾದವರನ್ನ ಮದುವಿಯಾಗ ಆರಾಮಾಗಿ ಇರು. ಯಾರು ಬ್ಯಾಡಂತಾರು?'

'ಯಕ್ಕಾ, ಅದು ನೀ ಹೇಳಿದಷ್ಟು ಸರಳ ಇಲ್ಲ. ನನಗ ಈಗ್ಯಾರ ಹೆಣ್ಣು ಕೊಡ್ತಾರ?'

'ಅದಕ್ಕ ನಾಯೇನು ಮಾಡ್ಲಿ? ನೀ ಕೆಟ್ಟ ಅದೀಯಂತ ಮಂದಿಗೆ ಗೊತ್ತಾಗಿ ಕನ್ಯೆ ಕೊಡವಲ್ಲರು ಕಾಣ್ತದ' ಎನ್ನುವ ಮಾತು ಅವಳ ಬಾಯಿಗೆ ಬಂದಿತ್ತು. ಆದರೆ ಆ ಮಾತನ್ನು ಕಷ್ಟಪಟ್ಟು ತಡೆದಳು. 'ನೋಡಪಾ ಮುತ್ತಪ್ಪ, ಆಕೀ ಈಗ ನನ್ನ ಮಗಳು ಅಲ್ಲ. ತಂದಿತಾಯಿ ಮಾತು ಧಿಕ್ಕರಿಸಿ ಹೋಗ್ಯಾಳು. ಆಕೀ ಜೀವನ ಆಕೀ ಸಂಗಡ. ನಮ್ಮ ಜೀವನ ನಮ್ಮ ಸಂಗಡ. ಆಕಿ ಬಗ್ಗೆ ನಮಗ ಹೇಳಾಕೂ ಬರಬ್ಯಾಡ, ಕೇಳಾಕೂ ಬರಬ್ಯಾಡ. ಯಾವುದಕ್ಕೂ ನಮ್ಮನ್ನ ಕರೀಬ್ಯಾಡ.'

ಮುತ್ತಪ್ಪ ಇಂಗು ತಿಂದ ಮಂಗನಂತಾದ. ಮಂದಿ ಹೇಳುವುದು ಖರೇ ಇದೆ. ತನ್ನ ಅಕ್ಕ ಹೀಗೆ ತನ್ನನ್ನು ನಡುನೀರಿನಲ್ಲಿ ಕೈಬಿಡುತ್ತಾಳೆಂದು ತಿಳಿದಿರಲಿಲ್ಲ. ತನ್ನಿಂದ ವಿಚ್ಛೇದನ ತೆಗೆದುಕೊಂಡಿರುವ ಹೆಂಗಸು ಸಂತೋಷದಿಂದ ಜೀವನ ಮಾಡಿಕೊಂಡಿದ್ದಾಳೆಂದರೆ ಅದು ತನ್ನ ಮರ್ಯಾದೆಗೆ ಕುತ್ತು! ಆ ಸುದ್ದಿ ಮಾಯಕ್ಕನಿಗೂ ತಲುಪಿತು. ಹೆಂಗಸು ತನಗೆ ಬೇಕಾದವರ ಜೊತೆ ಅಡ್ಡಾಡಿದರೆ, ಮಾತಾಡಿದರೆ, ಮದುವೆಯಾದರೆ ಇವರ ಹೊಟ್ಟೆಯಲ್ಲಿ ಖಾರಾ ಕಲಿಸಿದ ಹಾಗಾಗುತ್ತದೆ! ಮುತ್ತಪ್ಪನಿಗೆ ಯಾರೋ ತಲೆ ತುಂಬಿರಬೇಕು. ಯಾವಾಗಲೂ ಇಂತಹ ಹರಾಮಿ ಕೆಲಸವನ್ನೇ ಮಾಡುತ್ತಿರುತ್ತಾನೆ. ಅವನ ಗೆಳೆಯರೆಲ್ಲ ತುಪ್ಪಕ್ಕೆ ಬೆಂಕಿ ಹಾಕುವವರೇ ಆಗಿದ್ದಾರೆ.

ಒಬ್ಬರು 'ಹೋಗಲಿ ಬಿಡೋ ಮುತ್ತಪ್ಪ, ಅದನ್ನ ತಗೊಂಡ ಏನ್ ಮಾಡಾಂವ' ಎಂದರೆ ಇನ್ನೂ ಕೆಲವರು 'ಅಲ್ಲೋ ಮುತ್ತಣ್ಣ, ನೀ ಹೀಂಗ ಮಾಡು. ದೇವಪ್ಪನಿಗೆ ಬಿಗಿ ಹಚ್ಚು. ಅಂವಗ ಬೆದರಿಕೆ ಹಾಕು. ಆವಾಗ ಮಾಯಕ್ಕ ತನಗೆ ತಾನೇ ಅಂವನ್ನ ಬಿಟ್ಟು ಬರತಾಳ' ಎನ್ನುವ ಸಲಹೆ ಕೊಟ್ಟರು.

ಮಾಯಿ, ಅವರ ಅವ್ವ, ಅಪ್ಪ, ಅಣ್ಣತಮ್ಮ ಇವರೆಲ್ಲ ಸೇರಿಯೆ ತನಗೆ ಮೋಸ ಮಾಡಿದ್ದಾರೆ. ಮಾಯಿಯನ್ನು ಸರಳ ಜೀವನ ಮಾಡಲಿಕ್ಕೆ ಬಿಡಬಾರದು. ಮುತ್ತಣ್ಣ ಯೋಚಿಸಿಯೆ ಯೋಚಿಸಿದ.

***

ಮುತ್ತಪ್ಪನನ್ನು ಬಿಟ್ಟು ತವರುಮನೆ ಸೇರಿಕೊಂಡಿದ್ದ ದಿನಗಳಲ್ಲಿ ಎಕ್ಕೇರಿಯ ಮಂದಿಗೆ ಮಾಯಕ್ಕ ಗಂಡನನ್ನು ಬಿಟ್ಟದ್ದೇ ಒಳ್ಳೆಯದಾಯ್ತೆಂದು ಹೇಳಿದ್ದರು. ಆಕೆಯ ತಂದೆ ತಾಯಿಯನ್ನು ಇನ್ನಿಲ್ಲದಂತೆ ಪ್ರಶಂಸಿಸಿದ್ದರು. ಮಾಯಕ್ಕನಿಗೂ ಅವರ ಶ್ಲಾಘನೆ ದಿನಾಲೂ ಇದ್ದೇ ಇರುತ್ತಿತ್ತು. ಮಾಯಕ್ಕನನ್ನು ಹೊಗಳುತ್ತಿದ್ದರೆ ಆಕೆಯ ದೃಷ್ಟಿ ತಮ್ಮ ಮೇಲೆ ಬೀಳಬಹುದೆಂದು ಕೆಲವರು ಆ ದಿಶೆಯಲ್ಲಿ ಪ್ರಯತ್ನ ನಡೆಸಿದ್ದರು. ಆಕೆ ಯಾವಾಗಲೂ ತಮ್ಮ ಊರಲ್ಲಿಯೇ ಇರಲೆಂದು ಅವರ ಒಳಮನಸ್ಸು ಹೇಳುತ್ತಿತ್ತು. ಹೆಂಡತಿ ಬಿಟ್ಟು ಹೋಗಿದ್ದಕ್ಕೋ, ಕಾಯಿಲೆ ಕಸಾಲೆಯಿಂದ ತೀರಿಕೊಂಡಿದ್ದಕ್ಕೋ ಎರಡನೇ ಮದುವೆ ಮಾಡಿಕೊಳ್ಳುವ ನಿರೀಕ್ಷೆಯಲ್ಲಿದ್ದ ಹಲವು ಗಂಡಸರು ಮನಸ್ಸಿನೊಳಗೆ ಮಂಡಿಗೆ ಮೆಲ್ಲುತ್ತಿದ್ದರು. ಅವಳನ್ನು ಪಡೆಯುವ ಅದೃಷ್ಟ ತಮ್ಮದೇ ಇರಬಾರದೇಕೆ? ಆಕೆ ದೊಡ್ಡ ಮನಸ್ಸು ಮಾಡಿ ಒಲಿದರೆ ತಮ್ಮ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆಯೆ! ಹೇಗೂ ಮಾಯಕ್ಕ ಗಂಡನನ್ನು ಬಿಟ್ಟು ಬಂದಿದ್ದಾಳೆ, ಇನ್ನು ಅವಳ ಮದುವೆಯಂತೂ ಕನಸಿನ ಮಾತು. ಅವಳ ಅಪ್ಪ ಅವ್ವನನ್ನು ಒಪ್ಪಿಸಿ ಕೂಡಿಕೆ ಮಾಡಿಕೊಳ್ಳಬಹುದು. ಕೆಲವು ದಿನ ಸರಿಯಲಿ, ಒಮ್ಮೆಲೇ ಕೇಳುವುದು ಸರಿ ಆಗಲಾರದು. ಅಂತಹ ಸಮಯ ತಾನಾಗಿಯೆ ಬರಲೆಂದು ಕಾಯುವವರೆ ಕಡಿಮೆಯಿರಲಿಲ್ಲ. ತಲೆಯ ಮೇಲೊಂದು, ನಡುವಿನ ಮೇಲೊಂದು ಕೊಡ ಹೊತ್ತು ಅವಳು ನೀರು ತರಬೇಕಾದರೆ ಅನೇಕರ ದೃಷ್ಟಿ ಅವಳ ಮೇಲೆಯೆ ಇರುತ್ತಿತ್ತು. ಅವಳ ನಡಿಗೆ ಹಾಗೂ ಚಿಮ್ಮುವ ನಿರಿಗೆಗೆ ಮನಸೋತವರು ಬಹಳ ಜನರಿದ್ದರು. ಅವಳ ವ್ಯಕ್ತಿತ್ವವೆಂದರೆ ಕೆಡಲಾರದ ಗಿಟಕು ಕೊಬ್ಬರಿ! ಅವಳ ಮಾತಿಗಿರುವ ಆಕರ್ಷಣೆಯಾದರೂ ಎಂತಹದ್ದು? ಆ ಎಳೆತ, ಸೆಳೆತದಿಂದ ತಪ್ಪಿಸಿಕೊಳ್ಳುವುದು ಹೇಗೆ?

ನೀರಿನಂತೆ ಥಳಥಳವೆನ್ನುವ ಅವಳ ಕಣ್ಣುಗಳು ತಮ್ಮನ್ನು ನೋಡಿದವೋ ಇಲ್ಲವೋ? ಜನರ ಕಣ್ಣಿಂದ ಮಗಳನ್ನು ಕಾಯುವುದು ಹೇಗೆ? ಅಪ್ಪ ಅವ್ವರಿಗೆ ಚಿಂತೆಯಾಗಿತ್ತು. ಅದನ್ನು ಆಕೆಯೆ ಪರಿಹರಿಸಿಕೊಂಡಳು.

'ಅವ್ವಾ, ನೀವು ನನ್ನ ಬಗ್ಗೆ ವೃಥಾ ಚಿಂತಿ ಮಾಡಬ್ಯಾಡ್ರಿ. ನನ್ನ ಹೆಂಗ ರಕ್ಷಣಾ ಮಾಡಕೋಬೇಕೋ, ನನಗ ಗೊತ್ತದ.' ಆಕೆಯನ್ನು ಒಲಿಸಿಕೊಳ್ಳುವುದು ಕಷ್ಟವಲ್ಲ ಎಂದು ತಿಳಿದಿದ್ದವರು ನಿರಾಶೆಯಿಂದ ಕೈಚೆಲ್ಲಿದ ಪ್ರಸಂಗಗಳು ನಡೆದವು. ಹಲವರು ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡರು. 'ಅಸನರಿ ಹೆಣ್ಣು ಅಲ್ಲ ಆಕಿ. ನಮಗೇ ನೀರು ಇಳಿಸ್ತಾಳ. ಮನಸ್ಸಿಗೆ ಹತ್ತುವಂತ ಹತ್ತ ಮಾತು ತಡತಡಾ ಅಂದುಬಿಡ್ತಾಳ.' ಮಾಯಕ್ಕನನ್ನು ವೃಥಾ ಕೆಣಕಿ ತಾವೇಕೆ ಕೆಟ್ಟವರಾಗಬೇಕು. ಇವಳನ್ನು ಮಾತಾಡಿಸುವುದೂ ಒಂದೇ, ಹಾಳು ಗೋಡೆಗೆ ತಲೆ ಜಜ್ಜಿಕೊಳ್ಳುವುದೂ ಒಂದೇ!

ಮನೆಯಲ್ಲಿ ಕುಳಿತು ಮಾಯಕ್ಕನಿಗೂ ಬೇಜಾರು ಎನಿಸುತ್ತಿತ್ತು. ಮದುವೆಗೆ ಮುಂಚೆ ತಾನು ಎಷ್ಟೊಂದು ದುಡಿಯುತ್ತಿದ್ದೆ. ಒಬ್ಬಳೇ ಗುಡ್ಡಕ್ಕೆ ಹೋಗಿ ಉರುವಲು ತರುತ್ತಿದ್ದೆ. ಹೊಲದಲ್ಲಿ ಕಳೆ ತೆಗೆಯುತ್ತಿದ್ದೆ. ದನಗಳಿಗೆ ಮೇವು ಕೊರೆಯುತ್ತಿದ್ದೆ. ಹುಲ್ಲಿನ ಹೊರೆ ಹೊರುತ್ತಿದ್ದೆ. ಹಸುಎಮ್ಮೆಯ ಹಾಲು ಕರೆದು ಡೈರಿಗೂ ಹಾಕಿಬರುತ್ತಿದ್ದೆ. ಮುತ್ತಪ್ಪನ ಮನೆ ತೊರೆದ ಮೇಲೆ ಈಗ ಖಾಲಿಯಿರುವುದೆಂದರೆ ಮುಳ್ಳು ಚುಚ್ಚಿದಂತಾಗುತ್ತಿದೆ. ಊರಿನ ಮಹಿಳಾ ಸೊಸೈಟಿಯವರು ಒಂದು ದಿನ ಕರೆದರು. ಆಫೀಸು ಸ್ವಚ್ಛವಾಗಿಡುವ, ಸಣ್ಣಪುಟ್ಟ ಕೆಲಸ ಮಾಡುವ ಸಿಪಾಯಿ ಕೆಲಸ ಕೊಟ್ಟರು. ಇದರಿಂದ ಅವಳು ತುಂಬ ನಿರಾಳಳಾದಳು. ದೊಡ್ಡ ನೌಕರಿ ಸಿಕ್ಕಂತೆನಿಸಿತು. ಖಾಲಿಯಿದ್ದಾಗ ಹೊಲದ ಕೆಲಸವೂ ಇರುತ್ತಿತ್ತು. ಒಂದು ಸಲ ಪಕ್ಕದ ಮನೆಯ ಶೋಭಕ್ಕ ಅಡುಗೆ ಮಾಡಲು ಬರ್ತಿಯೇನೆಂದು ಕೇಳಿದಾಗ ಕುತೂಹಲಕ್ಕೆಂದು

